**ದಿನಾಂಕಃ 06-08-2026 ರಂದು ಪ್ರಮಾಣ ವಚನವನ್ನು ಬೋಧಿಸಲಾಯಿತು.**
**ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಆರ್.ವಿ.ಎನ್.ಕೆ. ವಕೀಲರಿಂದಃ**

ಸರ್ವೆ ನಂ.493 ವಿಸ್ತೀರ್ಣ 4 ಎಕರೆ 39 ಗುಂಟೆ ಕಲ್ಕೆರೆ ಗ್ರಾಮದಲ್ಲಿದ್ದು ಅದು ನನ್ನ ತಾಯಿಯ ತಾಯಿ ತವರು ಮನೆ ಆಸ್ತಿ ಎಂದರೆ ಸರಿ. ನನ್ನ ತಾಯಿ ಹೆಸರು ಜಯಮ್ಮ ನನ್ನ ತಾಯಿಯ ತಾಯಿ ಹೆಸರು ಬೈಯಮ್ಮ ಎಂದರೆ ಸರಿ. ಬೈಯಮ್ಮರ ತಾಯಿ ಹೆಸರು ಮುನಿಯಮ್ಮ ಎಂದರೆ ಸರಿ. ಮುನಿಯಮ್ಮರ ಗಂಡನ ಹೆಸರು ಜೋಗಪ್ಪ ಎಂದರೆ ಸರಿ. ಮುನಿಯಮ್ಮ ಮತ್ತು ಅವರ ಗಂಡ ಜೋಗಪ್ಪ ಮೂಲತಃ ಕಲ್ಕೆರೆ ಗ್ರಾಮದವರು ಎಂದರೆ ಸರಿ. ಕಲ್ಕೆರೆ ಗ್ರಾಮದ ಸರ್ವೆ ನಂ.493 ವಿಸ್ತೀರ್ಣ 04 ಎಕರೆ 39 ಗುಂಟೆ ಸ್ಪೇಷಲ್ ಡೆಪ್ಯೂಟಿ ಕಮೀಷನರ್ ಇನಾಮ್ ಅಬಾಲ್ಯೂಶನ್ ಆ್ಯಕ್ಟ ಅಡಿ ಮುನಿಯಮ್ಮರಿಗೆ ಮಂಜೂರಾಗಿತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಜೋಗಪ್ಪರಿಗೆ ಮಂಜೂರಾಗಿರುತ್ತದೆ ಎಂದು ಹೇಳುತ್ತಾರೆ. ಸರ್ವೆ ನಂಬರ 493 ಮುನಿಯಮ್ಮರಿಗೆ ಮಂಜೂರಾಗಿತ್ತು ಅದು ಅವರ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಮುನಿಯಪ್ಪ ತನ್ನ ಜೀವಿತ ಕಾಲದಲ್ಲಿ ಸರ್ವೆ ನಂಬರ 493 ವಿಸ್ತೀರ್ಣ 4 ಎಕರೆ 39 ಗುಂಟೆ ಯಾರಿಗೂ ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿ. ಮುನಿಯಮ್ಮ ತೀರಿಹೋದ ನಂತರ ಸರ್ವೆ ನಂಬರ 493 ಅವರ ಮಗಳಾದ ಬೈಯಮ್ಮರಿಗೆ ಬಂದಿರುತ್ತದೆ ಎಂದರೆ ಸರಿ. ಬೈಯಮ್ಮರಿಗೆ ಸರ್ವೆ ನಂ.493 ಅವರ ತಂದೆ-ತಾಯಿ ಕಡೆಯಿಂದ ಬಂದಿರುವ ಆಸ್ತಿ ಎಂದರೆ ಸರಿ. ಬೈಯಮ್ಮ ತನ್ನ ಜೀವಿತ ಕಾಲದಲ್ಲಿ ಸರ್ವೆ ನಂಬರ 493 ಯಾರಿಗೂ ಬರೆದುಕೊಟ್ಟಿರುವುದಿಲ್ಲ ಎಂದರೆ ಸರಿ. ಬೈಯಮ್ಮ ತೀರಿಹೋದ ನಂತರ ಸರ್ವೇ ನಂಬರ 493 ಕ್ಕೆ ವಾದಿ ಮತ್ತು

ಪ್ರತಿವಾದಿ 1 ರಿಂದ 3 ವಾರಸುದಾರರು ಎಂದರೆ ಸರಿ. ಬೈಯಮ್ಮ ತೀರಿಹೋದ ನಂತರ ವಾದಿ ಮತ್ತು ಪ್ರತಿವಾದಿ 1 ರಿಂದ 3 ರವರ ಹೆಸರಿಗೆ ಸರ್ವೆ ನಂ.493 ರ ಖಾತೆ ಆಗಿರುತ್ತದೆ ಎಂದರೆ ಸರಿ.

ಬೈಯಮ್ಮ ತೀರಿಹೋದ ನಂತರ ವಾದಿ ಮತ್ತು ಪ್ರತಿವಾದಿ 1 ರಿಂದ 3 ರವರ ಹೆಸರಿಗೆ ಸರ್ವೆ ನಂ.493 ರ ಖಾತೆ ಎಂ.ಆರ್.ಸಂಖ್ಯೆ:- 33/2009-10 ರಂತೆ ಆಗಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಆ ಸಮಯದಲ್ಲಿ ರಾಜಾರಾಮ ಎನ್ನುವವರು ದಾವೆ ಸಲ್ಲಿಸಿದ್ದು ಸದರಿ ದಾವೆ ಇತ್ಯರ್ಥ ಆದ ನಂತರ ಖಾತೆ ಆಗಿರುತ್ತದೆ ಎಂದು ಹೇಳುತ್ತಾರೆ. ಸಾಕ್ಷಿಗೆ ಒಂದು ಕ್ರಯ ಪತ್ರದ ದೃಢೀಕೃತ ನಕಲು ತೋರಿಸಲಾಗಿ ಅದರಲ್ಲಿ ಮುನಿವೆಂಕಟಮ್ಮರ ಗಂಡನ ಹೆಸರು ವೆಂಕಟಸ್ವಾಮಿ ಎಂದು ನಮೂದಾಗಿರುತ್ತದೆ, ಮುನಿಯಮ್ಮರ ಗಂಡನ ಹೆಸರು ವೆಂಕಟಪ್ಪ ಎಂದು ನಮೂದಾಗಿರುತ್ತದೆ, ಜಯಮ್ಮರ ಗಂಡನ ಹೆಸರು ಕೃಷ್ಣಪ್ಪ ಅಲಿಯಾಸ್ ಕಿಟ್ಟಪ್ಪ ಎಂದು ನಮೂದಾಗಿರುತ್ತದೆ. ಮುನಿರತ್ನಮ್ಮರ ಗಂಡನ ಪಿಳ್ಳರಾಮಪ್ಪ ಎಂದು ನಮೂದಾಗಿರುತ್ತದೆ ಎಂದು ಸಾಕ್ಷಿ ಒಪ್ಪಿಕೊಂಡಿದ್ದರಿಂದ ಸದರಿ ಕ್ರಯಪತ್ರದ ದೃಢೀಕೃತ ನಕಲು ಪ್ರತಿವಾದಿ ಪರ ವಕೀಲರ ವಿನಂತಿ ಮೇರೆಗೆ ನಿಡಿ-1 ಎಂದು ಗುರುತಿಸಲಾಯಿತು.

ನಿಡಿ-1 ನೋಂದಣಿ ಆಗುವ ಕಾಲಕ್ಕೆ ನನ್ನ ತಾಯಿ ಜಯಮ್ಮ ಉಪನೋಂದಣಾಧಿಕಾರಿ ಕಛೇರಿಗೆ ಹೋಗಿರುವುದಿಲ್ಲ ಎಂದರೆ ಸರಿ. ನನ್ನ ತಾಯಿ 3ನೇ ಪ್ರತಿವಾದಿಗೆ ಜಿ.ಪಿ.ಎ. ಬರೆದುಕೊಟ್ಟಿದ್ದು ಸದರಿ ಜಿ.ಪಿ.ಎ. ಆಧಾರದ ಮೇಲೆ 3ನೇ ಪ್ರತಿವಾದಿ ರೇವಣ್ಣರಿಗೆ ಕ್ರಯಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ದಿನಾಂಕಃ- 02-02-2010 ರಂದು ನನ್ನ ತಾಯಿ 3ನೇ ಪ್ರತಿವಾದಿಗೆ ನೋಂದಾಯಿತ ಜಿ.ಪಿ.ಎ.

ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿ 1 ರಿಂದ 3 ರೇವಣ್ಣಾರಿಗೆ ಕ್ರಯಪತ್ರ ಬರೆದುಕೊಟ್ಟಿರುತ್ತಾರೆ ಎಂದರೆ ಸರಿ. ಪ್ರತಿವಾದಿ 1 ರಿಂದ 3 ರೇವಣ್ಣಾರಿಂದ ರೂ.2 ಕೋಟಿ ಪಡೆದಿರುತ್ತಾರೆ ಎಂದರೆ ಸುಳ್ಳು. ಸಾಕ್ಷಿಗೆ ಒಂದು ಕನ್ವರಮೇಷನ್ ಡೀಡ್ ತೋರಿಸಲಾಗಿ ಅದರಲ್ಲಿ ಜಯಮ್ಮ ಗಂಡ ಕೃಷ್ಣಪ್ಪ ಅಲಿಯಾಸ್ ಕಿಟ್ಟಪ್ಪ ಇರುವ ಹೆಸರು ತನ್ನ ತಾಯಿಯ ಹೆಸರು ಎಂದು ಹೇಳುತ್ತಾರೆ. ನನ್ನ ತಾಯಿ ಜಯಮ್ಮ ರೇವಣ್ಣಾರಿಗೆ ದಿನಾಂಕಃ-23-09-2010 ರಂದು ಕನ್ವರಮೇಷನ್ ಡೀಡ್ ಬರೆದುಕೊಟ್ಟಿರುತ್ತಾರೆ ಎಂದರೆ ಸರಿ. ಸದರಿ ಕನ್ವರಮೇಷನ್ ಡೀಡ್ ನ ದೃಢೀಕೃತ ನಕಲು ಪ್ರತಿವಾದಿ ಪರ ವಕೀಲರ ವಿನಂತಿ ಮೇರೆಗೆ ನಿಡಿ-2 ಎಂದು ಗುರುತಿಸಲಾಯಿತು. ಕನ್ವರಮೇಷನ್ ಡೀಡ್ ಆಧಾರದ ಮೇಲೆ ನನ್ನ ತಾಯಿಗೆ 20 ರಿಂದ 30 ಲಕ್ಷ ಹಣ ನೀಡಿರುತ್ತಾರೆ.

ಸರ್ವೆ ನಂಬರ 493 ರ ಮೇಲೆ ನನ್ನ ತಾಯಿ ಜಯಮ್ಮ, ಪ್ರತಿವಾದಿ 1 ರಿಂದ 3 ತಮ್ಮ ಹಕ್ಕು ಕಳೆದುಕೊಂಡಿರುತ್ತಾರೆ ಎಂದರೆ ಸರಿ. ಮುನಿಶಾಮಪ್ಪ ಮನೆ ಅಳಿಯನಾಗಿ ಕಲ್ಕೇರೆ ಗ್ರಾಮದಲ್ಲಿ ವಾಸವಾಗಿದ್ದರು ಎಂದರೆ ಸುಳ್ಳು. ಮುನಿಶಾಮಪ್ಪ ಕಲ್ಕೇರೆ ಗ್ರಾಮದಲ್ಲಿ ಕೆಲಸ ಮಾಡಿಕೊಂಡು ವಾಸವಾಗಿದ್ದರು ಎಂದರೆ ಸರಿಯಲ್ಲ. ನನಗೆ ಮತ್ತು ನನ್ನ ತಾಯಿಗೆ ದಾವಾ ಸ್ವತ್ತುಗಳಲ್ಲಿ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಐಟಂ ನಂ.1 ಕೃಷ್ಣಪ್ಪ ಎನ್ನುವವರಿಂದ ಖರೀದಿಸಿರುವ ಆಸ್ತಿ ಆಗಿರುತ್ತದೆ. ದಾವಾ ಐಟಂ ನಂ.1 ತಿರುಮಳಮ್ಮರವರಿಗೆ ಸೇರಿದ ಆಸ್ತಿ ಎಂದರೆ ಸರಿ. ಸಾಕ್ಷಿ ಮುಂದುವರಿದು ತಿರುಮಳಮ್ಮ ಕೃಷ್ಣಪ್ಪನ ಹೆಂಡತಿ ಎಂದು ಹೇಳುತ್ತಾರೆ. ನಾವು ಗೊಲ್ಲ ಜನಾಂಗಕ್ಕೆ ಸೇರಿದವರು. ತಿರುಮಳಮ್ಮ ಬಣಜೀಗ ಜನಾಂಗಕ್ಕೆ ಸೇರಿದವರು ಎಂದರೆ ಸರಿ. ತಿರುಮಳಮ್ಮ ದಾವಾ ಐಟಂ ನಂ.1 ನಾಲ್ಕನೇ

ಪ್ರತಿವಾದಿ ನಾರಾಯಣಪ್ಪ ಮತ್ತು ರತ್ನಮ್ಮ ತಂದೆ ಚಂದ್ರಶೆಟ್ಟಿರವರಿಗೆ ಮಾರಾಟ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಐಟಂ ನಂ.1 ದಿನಾಂಕಃ- 22-08-1987 ರಂದು ನಾಲ್ಕನೇ ಪ್ರತಿವಾದಿ ನಾರಾಯಣಪ್ಪ ಮತ್ತು ರತ್ನಮ್ಮ ತಂದೆ ಚಂದ್ರಶೆಟ್ಟಿರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನಾಲ್ಕನೇ ಪ್ರತಿವಾದಿ ನಾರಾಯಣಪ್ಪರಿಗೆ ಮಾರಾಟ ಮಾಡಿರುತ್ತಾರೆ ಎಂದು ಹೇಳುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ವಕೀಲರು ಸಮಯ ಕೋರಿದ್ದು, ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)**

**ಓ.ಕೇ. ಹೇ. ಸರಿ ಇದೆ.**

**Sd/-**
**(ದಯಾನಂದ)**
**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಲೂರು.**